**ಪ್ರಧಾನ ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ತರೀಕೆರೆ**

**ಅಸಲು ದಾವಾ ಸಂಖ್ಯೆ :55/2023**

**PW-2**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಸಿದ್ದೇಶ್ |
| **ತಂದೆಯ ಹೆಸರು** | : | ಕಲ್ಲಪ್ಪ |
| **ವಯಸ್ಸು** | : | 40 ವರ್ಷ |
| **ಉದ್ಯೋಗ** | : | ಭೂಮಾಪಕರು |
| **ವಾಸಸ್ಥಳ** | : | ಹಳಿಯಾಳ |

**ದಿನಾಂಕಃ19-03-26 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ವಾದಿ ಪರ ಶ್ರೀ. BNK ವಕೀಲರಿಂದ ::**

ವಾದಿಯು ದಾವಾ ಶೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಹದ್ದುಬಸ್ತು ಮಾಡಲು ನಮ್ಮ ಕಚೇರಿಗೆ ಅರ್ಜಿ ನೀಡಿದ ಮೇರೆಗೆ ಸದರಿ ಕೆಲಸವನ್ನು ಮಾಡಿಕೊಡಲು ನಮ್ಮ ಕಚೇರಿಯಿಂದ ಭೂಮಾಪಕನಾಗಿ ನನ್ನನ್ನು ನೇಮಕ ಮಾಡಿರುತ್ತಾರೆ. ಅದರಂತೆ ನಾನು ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಹದ್ದುಬಸ್ತು ಮಾಡುವ ಸಲುವಾಗಿ ವಾದಿಗೆ ಹಾಗೂ ದಾವಾ ಶೆಡ್ಯೂಲ್ ಸ್ವತ್ತಿನ ಸುತ್ತಮುತ್ತಲಿನ ಆಸ್ತಿಗಳ ಮಾಲೀಕರಿಗೆ ನೋಟೀಸ್ ಅನ್ನು ಜಾರಿ ಮಾಡಿ ದಿಃ 16.02.2022 ರಂದು ದಾವಾ ಶೆಡ್ಯೂಲ್ ಸ್ವತ್ತಿನ ಬಳಿ ಹೋಗಿ ಪಕ್ಷಗಾರರ ಸಮಕ್ಷಮ ಸರ್ವೇ ಮಾಡಿ ಸ್ಥಳದಲ್ಲಿ ಹೇಳಿಕೆಯನ್ನು ದಾಖಲಿಸಿರುತ್ತೇನೆ. ನಂತರದಲ್ಲಿ ಕಚೇರಿಗೆ ಹೋಗಿ ಒಂದು ಹದ್ದುಬಸ್ತು ನಕ್ಷೆಯನ್ನು ತಯಾರಿಸಿಕೊಟ್ಟಿರುತ್ತೇನೆ. ಸಾಕ್ಷಿಯು ನಿಪಿ1 ರಲ್ಲಿ ಇರುವ ತನ್ನ 3 ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ1 ಎ ರಿಂದ ಸಿ ಎಂದು ಗುರುತಿಸಲಾಯಿತು. ನನ್ನ ಪ್ರಕಾರ ನಾನು ಸರ್ವೇ ಮಾಡಿದ ಆಸ್ತಿಯ ಉತ್ತರ ದಿಕ್ಕಿನಲ್ಲಿ ಸರ್ವೇ ನಂಬರ್ 184/5 ರ ಹಿಡುವಳಿದಾರರು ಸದರಿ ಸ್ವತ್ತನ್ನು 20 ಗುಂಟೆ ಒತ್ತುವರಿ ಮಾಡಿರುವುದು ನನಗೆ ಕಂಡು ಬಂದಿರುತ್ತದೆ.

**:: ಪಾಟೀ ಸವಾಲು :: ಪ್ರತಿವಾದಿ ಪರ ಶ್ರೀಮತಿ ಹೆಚ್ ಬಿ ವಕೀಲರಿಂದ ::**

ನಾನು ಅಳತೆಗೆಂದು ವಿವಾದಿತ ಸ್ವತ್ತಿನ ಬಳಿ ಹೋದಾಗ ಅರ್ಜಿದಾರರು ಮತ್ತು ಬಾಜುದಾರರು ಹಾಜರಿದ್ದರು. ಬಾಜುದಾರರರಾದ ನಂಜುಂಡಪ್ಪ, ಗಂಗಾದರಪ್ಪ, ಪಂಡಿತಾರಾದ್ಯ ಮತ್ತು ಮಂಜುನಾಥ ರವರ ಹಾಜರಿದ್ದರು. ಪ್ರತಿವಾದಿಯ ಜಾಗದ ಸರ್ವೇ ನಂಬರ್ ನನಗೆ ಈಗ ನೆನಪಿಲ್ಲ. ನಾನು ಪ್ರತಿವಾದಿಯ ಜಮೀನು ಅನ್ನು ಹಿಂದೆ ಪೋಡಿಯಾಗಿರುವ ಆಧಾರದಲ್ಲಿ ಅಳತೆ ಮಾಡಿರುತ್ತೇನೆ. ಸದರಿ ಪೋಡಿ ದಾಖಲೆ ನನ್ನ ವರದಿ ಜೊತೆ ಲಗತ್ತಿಸಿರುವುದಿಲ್ಲ ಎಂದರೆ ಸರಿ. ಕಾರಣ ಅದನ್ನು ಕೊಡುವ ಅವಶ್ಯಕತೆ ಇರುವುದಿಲ್ಲ. ಪ್ರತಿವಾದಿಯ ಜಮೀನು ಎಷ್ಟು ವಿಸ್ತೀರ್ಣದ ಜಮೀನು ಎಂದು ನನಗೆ ಗೊತ್ತಿಲ್ಲ. ಸರ್ವೇ ದಾಖಲೆಗಳ ಪ್ರಕಾರ ಪ್ರತಿವಾದಿಯ ಬಳಿ ಸರ್ವೇ ನಂಬರ್ 184 ರಲ್ಲಿ 2 ಎಕರೆ 30 ಗುಂಟೆ ಆಸ್ತಿ ಮಾತ್ರ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಉಳಿಕೆ 10 ಗುಂಟೆ ರಾಜಶೇಖರಯ್ಯ ಎನ್ನುವವರ ಹೆಸರಿನಲ್ಲಿ ಇರುತ್ತದೆ ಎಂದರೆ ಇರಬಹುದು. ಸಾಕ್ಷಿಯು ಮುಂದುವರೆದು ಸದರಿ ಸರ್ವೇ ನಂಬರ್ ಜಾಗವು ಬಹುಮಾಲೀಕತ್ವದ ಜಾಗ ಆಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಸರ್ವೇ ನಂಬರ್ 184 ರಲ್ಲಿನ ಎಲ್ಲಾ ಹಿಸ್ಸೆದಾರರಿಗೆ ನೋಟೀಸ್ ಅನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ಅರ್ಜಿದಾರರು ತಿಳಿಸಿರುವ ಎಲ್ಲಾ ಬಾಜುದಾರರಿಗೆ ನೋಟೀಸ್ ನೀಡಿರುತ್ತೇವೆ ಎಂದು ನುಡಿಯುತ್ತಾರೆ. ದಾವಾ ಸರ್ವೇ ನಂಬರ್ ಜಾಗದ ಎಲ್ಲಾ ಮಾಲೀಕರ ವಿವರವನ್ನು ಅರ್ಜಿದಾರರೇ ಸಲ್ಲಿಸಿರುತ್ತಾರೆ. ಸಾಕ್ಷಿಯು ಮುಂದುವರೆದು ಯಾರಿಗಾದರೂ  ನೋಟೀಸ್ ಜಾರಿಯಾಗದಿದ್ದಲ್ಲಿ ಅವರಿಗೆ ಅಳತೆ ದಿನ ತಕರಾರು ಸಲ್ಲಿಸುವ ಅವಕಾಶ ಇರುತ್ತದೆ ಎಂದು ನುಡಿಯುತ್ತಾರೆ. ಸರ್ವೇ ನಂಬರ್ 184/5 ರಲ್ಲಿ ಎಷ್ಟು ವಿಸ್ತೀರ್ಣದ ಜಾಗ ಇರುತ್ತದೆ ಎಂದು ನನ್ನ ವರದಿಯಲ್ಲಿ ಕಂಡು ಬರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದನ್ನು ನಮೂದು ಮಾಡಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಅಳತೆ ಮಾಡುವ ಸಮಯದಲ್ಲಿ ಸಂಪೂರ್ಣ ಜಮೀನು ಅಳತೆ ಮಾಡಬೇಕು ಎಂದರೆ ಸರಿ. ನಾನು ಅಳತೆ ಮಾಡುವ ಸಮಯದಲ್ಲಿ ರಾಜಶೇಖರಯ್ಯ ರವರು ತಕರಾರು ಮಾಡಿದ ಕಾರಣ ನಾನು ಯಾವುದೇ ಅಳತೆ ಕಾರ್ಯ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮಾಡಿರುವ ಮಹಜರ್ ಗೆ ಮಂಜುನಾಥ ಮತ್ತು ಪಂಡಿತಾರಾಧ್ಯ ರವರು ಸಹಿ ಮಾಡಿರುವುದಿಲ್ಲ, ಅದನ್ನು ಹೊರತುಪಡಿಸಿ ಅರ್ಜಿದಾರರು ಮತ್ತು ಉಳಿಕೆ ಬಾಜುದಾರರು ಸಹಿ ಮಾಡಿರತ್ತಾರೆ. ನನ್ನ ಮಹಜರ್ ಗೆ 1 ರಿಂದ 3 ನೇ ವಾದಿ ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿರುವುದಿಲ್ಲ ಎಂದರೆ ಸರಿ. ನಾನು ಸುಳ್ಳಾಗಿ ಪ್ರತಿವಾದಿಯು ದಾವಾ ಶೆಡ್ಯೂಲ್

ಸ್ವತ್ತನ್ನುಒತ್ತುವರಿ ಮಾಡಿರುವುದಾಗಿ ವರದಿ ನೀಡಿದ್ದು ನನ್ನ ವರದಿ ಸಂಪೂರ್ಣ ಸರ್ವೇ ನಂಬರ್ ಗೆ ಲಾಗು ಆಗುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂಬರ್ 184 ರ ಒಟ್ಟು ವಿಸ್ತೀರ್ಣ ನನಗೆ ಈಗ ನೆನಪಿಲ್ಲ. ಸರ್ವೇ ನಂಬರ್ 184 ರ ಸಂಪೂರ್ಣ ವಿಸ್ತೀರ್ಣ ವನ್ನು ನಾನು ಅಳತೆ ಮಾಡದೇ ಅಪೂರ್ಣ ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸರ್ವೇ ನಂಬರ್ 184 ರ ಸಂಪೂರ್ಣ ವಿಸ್ತೀರ್ಣದ ಅಳತೆ ಮಾಡಿದ್ದಲ್ಲಿ ನನಗೆ ಸತ್ಯಾಂಶ ತಿಳಿಯುತಿತ್ತು ಎಂದರೆ ಸರಿಯಲ್ಲ. ನಾನು ವಾದಿಗಳ ಜೊತೆ ಶಾಮಿಲಾಗಿ ಸುಳ್ಳು ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಗಳ ಚಿತ್ತಾವಣೆ ಮೇರೆಗೆ ಸುಳ್ಳು ನಕ್ಷೆ ಹಾಗೂ ವರದಿಯನ್ನು ಕಚೇರಿಯಲ್ಲಿ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ.

**: ಮರುವಿಚಾರಣೆ ಇಲ್ಲ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರ. ಸಿ.ಜೆ ಮತ್ತು ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: